ಸಮಸ್ಯೆಗಳು ಇವೆಯೆಂಬುದನ್ನು ಮತ್ತು ಎಲ್ಲೆಲ್ಲಿ ವೈದ್ಯರ ಕೊರತೆ ಇದೆಯೆಂಬುದನ್ನು ನೋಡಿಕೊಂಡು ಸರಿಪಡಿಸುತ್ತೇನೆ.

ಮಂಜೂರಾದ ಹುದ್ದೆಗಳ ವಿವರ

56(151) ಶ್ರೀ ವಸಂತಬಂಗೇರ ಕೆ:(ಬೆಳ್ತಂಗಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಡಾ:ಬಿ.ಆರ್. ಅಂಬೇಡ್ಕರ್ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಅಭಿವೃದ್ಧಿ ನಿಗಮದ ಕಛೇರಿಯಲ್ಲಿರುವ ಮಂಜೂರಾದ ಹುದ್ದೆಗಳು ಎಷ್ಟು?

ಆ) ಎಷ್ಟು ಹುದ್ದೆಗಳು ಖಾಲಿ ಇರುತ್ತವೆ; ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿಗೊಳಿಸಲಾಗುವುದು

ಇ) 2008–09 ಮತ್ತು 2009–10ರ ಸಾಲಿನಲ್ಲಿ ಸದ್ರಿ ಕಛೇರಿಯಲ್ಲಿರುವ ಸಿಬ್ಬಂದಿಗಳು ಪಡೆದ ಪ್ರಯಾಣ ವೆಚ್ಚದ ಮೊತ್ತ ಎಷ್ಟು? (ಮೇಲಿನ ವಿವರವನ್ನು ಶ್ರೇಣಿವಾರು ನೀಡುವುದು)

ಶ್ರೀ ಡಿ ಸುಧಾಕರ(ಸಮಾಜ ಕಲ್ಯಾಣ ಸಚಿವರು):

ಅ) 1. ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ. ದಕ್ಷಿಣ ಕನ್ನಡ ಜಿಲ್ಲೆ – ಒಟ್ಟು 15 ಹುದ್ದೆಗಳು.

2. ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ – ಒಟ್ಟು 06 ಹುದ್ದೆಗಳು

ಆ)

1. ಡಾ: ಬಿ.ಆರ್.ಅಂಬೇಡ್ಕರ್ ನಿಗಮ, ದಕ್ಷಿಣ ಕನ್ನಡ ಜಿಲ್ಲೆ–ಒಟ್ಟು 09 ಹುದ್ದೆಗಳು.

2. ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ–ಒಟ್ಟು 06 ಹುದ್ದೆಗಳು.

ಇ) ಹುದ್ದೆಗಳನ್ನು ಭರ್ತಿ ಮಾಡುವ ವಿಷಯ ಪರಿಶೀಲನೆಯಲ್ಲಿದೆ.

1. ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ದಕ್ಷಿಣ ಕನ್ನಡ ಜಿಲ್ಲೆ.

	2008–09	2009–10
ಗ್ರೂಪ್–ಎ	10,566.00	–
ಗ್ರೂಪ್–ಬಿ	6,265.00	3,881.00
ಗ್ರೂಪ್–ಸಿ	10,564.00	15,529.00

2. ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ – ಇರುವುದಿಲ್ಲ

ಶ್ರೀ ಕೆ ವಸಂತಬಂಗೇರ: ಮಾನ್ಯ ಅಧ್ಯಕ್ಷರೆ, ದಕ್ಷಣ ಕನ್ನಡ ಜಿಲ್ಲೆಯ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕಚೇರಿಗೆ ಮಂಜೂರಾದ ಹುದ್ದೆಗಳು ಎಷ್ಟೆಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಸರ್ಕಾರದ ಉತ್ತರ 15 ಹುದ್ದೆಗಳೆಂದು ತಿಳಿಸಿದ್ದಾರೆ. ಅದೇ ರೀತಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ ಕಚೇರಿಗೆ ಮಂಜೂರಾದ ಹುದ್ದೆಗಳೆಷ್ಟು? ಎಂದು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಸರ್ಕಾರ ಉತ್ತರದಲ್ಲಿ 6 ಹುದ್ದೆಗಳೆಂದು ತಿಳಿಸಿರುತ್ತಾರೆ. ಮತ್ತೆ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟೆಂದು ಕೇಳಿದ್ದೇನೆ, ಅದಕ್ಕೆ 9 ಹುದ್ದೆಗಳು ಇವೆಯೆಂದು ತಿಳಿಸಿದ್ದಾರೆ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ 6 ಹುದ್ದೆಗಳು ಖಾಲಿ ಇವೆಯೆಂದು ತಿಳಿಸಿದ್ದಾರೆ. ಇಲ್ಲಿ 6 ಹುದ್ದೆಗಳು ಖಾಲಿ ಇರುವಂಥದ್ದು ಈ 6 ಹುದ್ದೆಗಳು ಖಾಲಿ ಇವೆ ಈ ಕಛೇರಿ ಬಾಗಿಲು ಹಾಕಿದೆಯೇ ಅಥವಾ ಮುಚ್ಚಿದೆಯೇ ಎಂಬ ಪ್ರಶ್ನೆಯನ್ನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಡಿ ಸುಧಾಕರ್: ಮಾನ್ಯ ಅಧ್ಯಕ್ಷರೆ, ಅಲ್ಲಿ ಇನ್ನು ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತವನ್ನು ಪ್ರಾರಂಭ ಮಾಡಿಲ್ಲ. ಅಲ್ಲಿ ಹುದ್ದೆಗಳನ್ನು ಭರ್ತಿ ಮಾಡಿ, ಕಚೇರಿಯನ್ನು ಪ್ರಾರಂಭ ಮಾಡುವುದಕ್ಕೆ ಶೀಘ್ರದಲ್ಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ ವಸಂತಬಂಗೇರ: ಮಾನ್ಯ ಅಧ್ಯಕ್ಷರೆ, ಈ ಕಛೇರಿಯನ್ನು ಯಾವಾಗ ಪ್ರಾರಂಭ ಮಾಡುತ್ತಾರೆ? ಮತ್ತು ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ?

ಶ್ರೀ ಡಿ ಸುಧಾಕರ: ಮಾನ್ಯ ಅಧ್ಯಕ್ಷರೆ, ನಿಗಮಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ವಿಷಯವಾಗಿ ಮಂಗಳೂರಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಮುಂದಿನ ತಿಂಗಳೊಳಗೆ ಈ ಕಚೇರಿಯನ್ನು ಪ್ರಾರಂಭ ಮಾಡಿ ಇರುವ ಹುದ್ದೆಗಳನ್ನು ತುಂಬುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

57(448) ಶ್ರೀ ಹ್ಯಾರಿಸ್ ಎನ್ ಎ:(ಶಾಂತಿನಗರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವಾಜಪೇಯಿ ಆರೋಗ್ಯ ಶ್ರೀ ಯೋಜನೆಯ ಅನುಷ್ಠಾನದ ವಿವರಗಳೇನು;

ಆ) ಈ ಯೋಜನಾ ಸೌಲಭ್ಯಗಳನ್ನು ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸಲಾಗಿದೆಯೇ;

ಇ) ಯೋಜನೆಯ ಫಲಾನುಭವಿಗಳಿಗೆ ನಿಗದಿಪಡಿಸಲಾದ ಅರ್ಹತೆಗಳೇನು;

ಶ್ರೀ ಬಿ ಶ್ರೀರಾಮುಲು(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಈ ಯೋಜನೆಯಡಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ 402 ವಿವಿಧ ಆಘಾತಕಾರಿ ಕಾಯಿಲೆಗಳಿಗೆ ಅಂದರೆ, ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡದ ತೊಂದರೆ, ಸುಟ್ಟಗಾಯ ಪಾಲಿಟ್ರಾಮ ಇತ್ಯಾದಿಗಳಿಗೆ ಗುರುತಿಸಲ್ಪಟ್ಟ ಆಸ್ಪತ್ರೆಗಳಲ್ಲಿ ಉಚಿತವಾಗಿ ವೈದ್ಯಕೀಯ ಚಿಕಿತ್ಸೆಯನ್ನು ಪ್ರತಿ ಕುಟುಂಬಕ್ಕೆ ಫ್ಯಾಮಿಲಿ ಫ್ಲೋಟರ್ (family floater) ಅಧಾರದ ಮೇಲೆ 1,50,000/– ರಿಂದ 2,00,000/– ರೂ.ಗಳಿಗೆ ಸೀಮಿತವಾಗಿ ನೀಡಲಾಗುತ್ತಿದೆ.

ಆ) ಇಲ್ಲ. ಗುಲ್ಬರ್ಗಾ ಕಂದಾಯ ವಿಭಾಗದ 6 ಜಿಲ್ಲೆಗಳಾದ ಬೀದರ್, ಗುಲ್ಬರ್ಗ, ಯಾದಗಿರ್, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಈ ಯೋಜನೆಯು ಅನುಷ್ಠಾನಗೊಳ್ಳುತ್ತಿದೆ.